


**40** ವರ್ಷದ ಶೈಕ್ಷಣಿಕ ಅನುಭವ

# ಕೆಜಿಯಿಂದ ಪಿಜಿವರೆಗೆ

## ಆಕ್ಸ್‌ಫರ್ಡ್ ಶಿಕ್ಷಣ ಸಾಮ್ರಾಜ್ಯ

ರಮೇಶ್ ದೊಡ್ಡಪುರ

ಶಿಕ್ಷಣದಲ್ಲಿ ಶಿಸ್ತು, ಗುಣಮಟ್ಟ ಹಾಗೂ ಅದಕ್ಕೆ ತಕ್ಕ ಮೂಲಭೂತ ಸೌಕರ್ಯಗಳನ್ನು ಗುರಿಯಾಗಿಸಿಕೊಂಡು ಶಿಕ್ಷಣ ತಜ್ಞ ಎಸ್. ನರಸರಾಜು ಅವರು 1974ರಲ್ಲಿ, ಚಿಲ್ಡ್ರನ್ಸ್ ಎಜುಕೇಷನ್ ಸೊಸೈಟಿ ಅಡಿಯಲ್ಲಿ ಆಕ್ಸ್‌ಫರ್ಡ್ ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿದರು. ಜೆ.ಪಿ ನಗರದಲ್ಲಿ ಆರಂಭವಾದ ಸಂಸ್ಥೆ ಇಂದು ಪ್ರಮುಖವಾಗಿ ಎಚ್.ಎಸ್.ಆರ್ ಲೇಔಟ್, ಹೊಂಗಸಂದ್ರ, ಬೊಮ್ಮನಹಳ್ಳಿಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದೆ. ಪೂರ್ವ ಪ್ರಾಥಮಿಕದಿಂದ (ಕೆಜಿ) ಸ್ನಾತಕೋತ್ತರದವರೆಗೆ (ಪಿಜಿ) 36 ಸಂಸ್ಥೆಗಳು ಇಂದು ಆಕ್ಸ್‌ಫರ್ಡ್ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಸಮೂಹದ ಎಲ್ಲ ಸಂಸ್ಥೆಗಳೂ ನ್ಯಾಷನಲ್ ಅಸೆಸ್‌ಮೆಂಟ್ ಆ್ಯಂಡ್ ಅಕ್ರಿಡಿಷನ್ ಕೌನ್ಸಿಲ್‌ನಿಂದ(ನ್ಯಾಕ್) ಪ್ರಮಾಣೀಕೃತವಾಗಿದ್ದು, ಎ ಗ್ರೇಡ್ ಪಡೆದಿವೆ. ದಂತ ವೈದ್ಯಕೀಯ ಕಾಲೇಜಿನಲ್ಲಿ ಸಾರ್ವಜನಿಕರಿಗೆ ಉಚಿತ ತಪಾಸಣೆ, ಶಸ್ತ್ರಚಿಕಿತ್ಸೆಯನ್ನು ನಡೆಸಿಕೊಂಡು ಬರಲಾಗುತ್ತಿದೆ. ನ್ಯಾಕ್ ಪ್ರಾಮಾಣೀಕರಿಸಿ ನೀಡುವ ನಾಲ್ಕು ಅಂಕಗಳಲ್ಲಿ ದಂತ ವೈದ್ಯಕೀಯ ಕಾಲೇಜಿಗೆ 3.66 ಅಂಕ ಲಭಿಸಿದೆ.

## ವಿಜ್ಞಾನ ಕಾಲೇಜು (ಎಚ್‌ಎಸ್‌ಆರ್ ಲೇಔಟ್)

**1994ರಲ್ಲಿ ಆರಂಭಗೊಂಡ ವಿಜ್ಞಾನ ಕಾಲೇಜು ಇಂದು ಬೆಂಗಳೂರಿನಲ್ಲೇ ಅತ್ಯುತ್ತಮ ವಿಜ್ಞಾನ ಕಾಲೇಜುಗಳ ಪೈಕಿ ಗುರುತಿಸಲ್ಪಡುತ್ತಿದೆ. ಪ್ರಸಿದ್ಧ ನಿಯತಕಾಲಿಕೆ ಇಂಡಿಯಾ ಟುಡೆ 2014ರಲ್ಲಿ ಬಿಡುಗಡೆ ಮಾಡಿದ ಪಟ್ಟಿಯಲ್ಲಿ ಕರ್ನಾಟಕದಲ್ಲಿ 4ನೇ ಹಾಗೂ ದೇಶದಲ್ಲಿ 16ನೇ ಸ್ಥಾನ ಪಡೆದಿದೆ. ಮತ್ತೊಂದು ನಿಯತಕಾಲಿಕೆ ದಿ ವೀಕ್ ನಡೆಸಿದ ಸಮೀಕ್ಷೆಯಲ್ಲಿ ಕರ್ನಾಟಕದಲ್ಲಿ 5ನೇ ಹಾಗೂ ದೇಶಾದ್ಯಂತ 31ನೇ ಸ್ಥಾನದಲ್ಲಿದೆ.**



### ಕೋರ್ಸ್‌ಗಳು

**ಬಿಎಸ್‌ಸಿ...**

ಸಿಝಡ್‌ಎಂಬಿ, ಸಿಜಿಬಿಟಿ, ಜಿಬಿಟಿಬಿಸಿ, ಜಿಟಿಎಂಬಿಬಿಸಿ, ಸಿಝಡ್‌ಬಿಟಿ, ಬಿಝಡ್‌ಎಂಬಿ, ಪಿಎಂಸಿ, ಇಎಂಸಿ, ಎಸ್‌ಎಂಸಿ, ಇಲೆಕ್ಟ್ರಾನಿಕ್ಸ್, ಫ್ಯಾಷನ್ ಆ್ಯಂಡ್ ಅಪಾರೆಲ್ ಡಿಸೈನ್ ಜೊತೆಗೆ ಬಿಸಿಎ

**ಸ್ನಾತಕೋತ್ತರ...**

ಮೈಕ್ರೋಬಯಾಲಜಿ, ಬಯೋಟೆಕ್ನಾಲಜಿ, ಬಯೋ ಕೆಮಿಸ್ಟ್ರಿ, ಅಪ್ಲೈಡ್ ಜೆನೆಟಿಕ್ಸ್, ಗಣಿತ, ಇಲೆಕ್ಟ್ರಾನಿಕ್ ಸೈನ್ಸ್, ಕಂಪ್ಯೂಟರ್ ಸೈನ್ಸ್, ಅಪಾರೆಲ್ ಟೆಕ್ನಾಲಜಿ ಆ್ಯಂಡ್ ಮ್ಯಾನೇಜ್‌ಮೆಂಟ್, ಕೆಮಿಸ್ಟ್ರಿ, ಸ್ಟ್ಯಾಟಿಸ್ಟಿಕ್ಸ್ ಜತೆಗೆ ಬಯೋಟೆಕ್ನಾಲಜಿ ಫಿನಿಶಿಂಗ್ ಸ್ಕೂಲ್ ಹಾಗೂ ಇಂಗ್ಲಿಷ್ ಎಂಎ

### ಸಂಶೋಧನೆ ಮತ್ತು ಪ್ರಾಜೆಕ್ಟ್...

ಸ್ನಾತಕೋತ್ತರ ವಿಭಾಗದಲ್ಲಿ ಸಂಶೋಧನೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಕಳೆದ ಕೆಲವು ವರ್ಷಗಳಿಂದ ಸಿಐಎಸ್‌ಇಇ, ಕೆ-ಫಸ್ಟ್, ಕರ್ನಾಟಕ ಸರ್ಕಾರ, ವಿಜಿಎಸ್‌ಟಿ ಸೇರಿದಂತೆ ವಿವಿಧ ಸಂಸ್ಥೆಗಳಿಂದ ಸಂಶೋಧನಾ ಧನಸಹಾಯ ಲಭಿಸಿದೆ. ಕರ್ನಾಟಕ ಸರ್ಕಾರದ ಧನ ಸಹಾಯದ ಆಧಾರದಲ್ಲಿಯೇ ಬಯೋಟೆಕ್ನಾಲಜಿ ಫಿನಿಶಿಂಗ್ ಸ್ಕೂಲ್ (ಬಿಟಿಎಫ್‌ಎಸ್) ಆರಂಭಿಸಲಾಗಿದೆ.

ಕಳೆದ ವರ್ಷ ಬೋಧಕ ಸಿಬ್ಬಂದಿಯ 27 ಸಂಶೋಧನಾ ಪ್ರಬಂಧಗಳು ಪ್ರತಿಷ್ಠಿತ ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿದ್ದು, ರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ 37 ಪ್ರಬಂಧ ಮಂಡಿಸಿದ್ದಾರೆ. ಎಸ್‌ಎಎಸ್, ಎಸ್‌ಪಿಎಸ್‌ಎಸ್, ಅನಿಮಲ್ ಕಲ್ಚರ್ ಟೆಕ್ನಿಕ್, ಪಿಸಿಆರ್ ಟೆಕ್ನಿಕ್‌ಗಳಲ್ಲಿ ಕಾರ್ಯಾಗಾರ ನಡೆಸಲಾಗಿದೆ. ಆಕ್ಸ್‌ಫರ್ಡ್ ವಿಜ್ಞಾನ ಕಾಲೇಜಿನ ಬೋಧಕ ಸಿಬ್ಬಂದಿ ವಿಜಿಎಸ್‌ಟಿ, ಕರ್ನಾಟಕ ಸರ್ಕಾರದಿಂದ ಒಟ್ಟು 6 ಪ್ರಮುಖ ಪ್ರಾಜೆಕ್ಟ್‌ಗಳನ್ನು ಪಡೆದಿದ್ದಾರೆ.



ವಿದ್ಯಾರ್ಥಿಗಳ ಸರ್ವಾಂಗೀಣ ಉನ್ನತಿಗಾಗಿ ಅವಶ್ಯಕ ಸೌಲಭ್ಯವೆಲ್ಲವನ್ನೂ ನೀಡುವುದೇ ಸಂಸ್ಥೆಯ ಉದ್ದೇಶ. ಆಕ್ಸ್‌ಫರ್ಡ್ ಆಡಳಿತ ಮಂಡಳಿಗೆ ಶಿಕ್ಷಣ ಸಂಸ್ಥೆ ನಡೆಸುವುದೊಂದೇ ಕಾಯಕ. ಅದಕ್ಕೆಂದೇ ಶಿಕ್ಷಣ ಸಂಸ್ಥೆಯ ಅಂಗಳದಲ್ಲೇ ವಸತಿಯನ್ನೂ ನಿರ್ಮಿಸಿಕೊಂಡು ಅಲ್ಲೇ ವಾಸಿಸುತ್ತಿದ್ದೇವೆ.

। ಎಸ್.ಎನ್.ವಿ.ಎಲ್. ನರಸಿಂಹ ರಾಜು
ಕಾರ್ಯನಿರ್ವಾಹಕ ನಿರ್ದೇಶಕ, ಆಕ್ಸ್‌ಫರ್ಡ್ ಶಿಕ್ಷಣ ಸಂಸ್ಥೆಗಳು

### ರ‍್ಯಾಂಕ್‌ಗಳು

ಕಾಲೇಜಿನ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ರ‍್ಯಾಂಕ್ ಗಳಿಕೆಯಲ್ಲೂ ಮುಂದಿದ್ದಾರೆ. ಕಲಾ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ 2012-13ರಲ್ಲಿ 5ನೇ, 2013-14ರಲ್ಲಿ 1ನೇ ಹಾಗೂ 4ನೇ ರ‍್ಯಾಂಕ್ ಲಭಿಸಿದೆ. ಎಂಬಿಎ ವಿಭಾಗದಲ್ಲಿ 2011-12ರಲ್ಲಿ 1ನೇ, 2012-13ರಲ್ಲಿ 5ನೇ ಹಾಗೂ 2013-14ರಲ್ಲಿ 4ನೇ ರ‍್ಯಾಂಕ್ ಲಭಿಸಿದೆ.

### ಆಡಳಿತ ಕಚೇರಿ

ಸಿ.ಎ. ಸೈಟ್ ನಂ. 40, ಮೊದಲನೇ ಹಂತ, ಜೆ.ಪಿ. ನಗರ,
ಬೆಂಗಳೂರು-560078, ದೂರವಾಣಿ: 080 2245 2855,
2665 9532, 3041 0501 / 02
ವೆಬ್‌ಸೈಟ್: www.theoxford.edu
ಇ ಮೇಲ್: info@theoxford.edu